ಸಿಸಿ 892/2022

ಪಿಡಬ್ಲ್ಯೂ-1

ದಿ : **24.05.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ಶ್ರೀ ಕೆ.ಆರ್.ಕೆ ವಕೀಲರಿಂದ**

ನಾನು ದಿನಾಂಕಃ 04.04.2022 ರಂದು ಹಣ ಕೊಟ್ಟಿದ್ದೇನೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ ಒಂದು ವಾರದ ಹಿಂದೆ ಆರೋಪಿ ನನ್ನ ಬಳಿ ಹಣ ಕೇಳಿದ್ದರು. ಆರೋಪಿ ಹಣ ಕೇಳಿದಾಗ ನನ್ನ ಬಳಿ ವ್ಯವಸಾಯ ಮಾಡಿದ ಹಣ ಇತ್ತು ಮತ್ತು ಬ್ಯಾಂಕಿನಲ್ಲಿ ಹಣ ಇತ್ತು, ಅವುಗಳನ್ನು ಸೇರಿಸಿ ಕೊಟ್ಟಿರುತ್ತೇನೆ. ನಾನು ದೂರಿನಲ್ಲಿ ಮತ್ತು ತಿಳುವಳಿಕೆ ಪತ್ರದಲ್ಲಿ ಹಣದ ಮೂಲದ ಬಗ್ಗೆ ಹೇಳಿರುತ್ತೇನೆ. ಆರೋಪಿಯ ಅಂಗಡಿಯ ಬಳಿ ಹಣದ ವ್ಯವಹಾರವಾಗಿರುತ್ತದೆ. ಆರು ಲಕ್ಷ ಹಣ ನೀಡುವ ವೇಳೆಯಲ್ಲಿ ಆರೋಪಿ ಮತ್ತು ನಾನು ಇಬ್ಬರೇ ಇದ್ದೆವು. ಆರು ಲಕ್ಷ ಹಣವನ್ನು ನಾನು ಒಂದೇ ದಿನ ಒಟ್ಟಿಗೆ ಕೊಟ್ಟಿರುತ್ತೇನೆ. ನಾನು ಹೆಚ್ಚಿಗೆ 500-00 ರೂ. ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ನಾನು ಹಣ ಕೊಟ್ಟಾಗ ಬೆ. 10 ರಿಂದ 11 ಗಂಟೆಯಾಗಿತ್ತು.

ಒಂದು ಲಕ್ಷಕ್ಕಿಂತ ಹೆಚ್ಚಿನ ಹಣ ಕೊಡಬೇಕಾದರೆ ಅದನ್ನು ಡಿಡಿ ಮೂಲಕ ಕೊಟ್ಟಿದ್ದೀರ ಎಂದರೆ ಸಾಕ್ಷಿಯು ನಾನು ನಗದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರ್.ಬಿ.ಐ ನಿಯಮದಂತೆ ಒಂದು ಲಕ್ಷಕ್ಕೂ ಹೆಚ್ಚು ಹಣ ಕೊಡಬೇಕಾದಲ್ಲಿ ಡಿಡಿ ಅಥವಾ ಖಾತೆ ಮೂಲಕ ವರ್ಗಾವಣೆ ಮಾಡಬೇಕು, ನಾನು ಆರು ಲಕ್ಷ ಹಣವನ್ನು ಕೊಡದೇ ಇದ್ದರೂ ಸಹಾ ಕೊಟ್ಟಿದ್ದೇನೆ ಎಂಬ ಬಗ್ಗೆ ಹೇಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿಃ 04.04.2022 ರಂದು ಆರೋಪಿಯು ಗುಂಡ್ಲುಪೇಟೆಯಲ್ಲಿ ಇರಲಿಲ್ಲ, ಈ ಕಾರಣದಿಂದ ನಾನು ಅವರಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ನನಗಿಂತ ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಆರೋಪಿಯು ಬ್ಯಾಂಕಿನಲ್ಲಿ ಹೆಚ್ಚಿನ ಹಣದ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಿತ್ತನೆ ವೇಳೆಯಲ್ಲಿ ಆರೋಪಿಯು ಈರುಳ್ಳಿ ಮತ್ತು ಅರಿಶಿನವನ್ನು ಸಾಲವಾಗಿ ಕೊಡುತ್ತಾರೆ, ಈ ಕಾರಣದಿಂದ ನನಗೂ ಸಹಾ ಕೊಡುತ್ತಿದ್ದರು ಎಂದರೆ ಸಾಕ್ಷಿಯು ನನಗೂ ಕೊಟ್ಟಿದ್ದರು, ನಾನು ಅದನ್ನು ವಾಪಸ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ತನ್ನ ಹೆಚ್.ಕೆ.ಬಿ ಸಂಸ್ಥೆಯಲ್ಲಿ ವಾರ್ಷಿಕವಾಗಿ ಹತ್ತು ಲಕ್ಷಕ್ಕೂ ಮೇಲ್ಪಟ್ಟು ಹಣದ ವ್ಯವಹಾರ ಮಾಡುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಆರೋಪಿತರು ಬಿತ್ತನೆ ಬೀಜವನ್ನು ಮಾರಾಟ ಮಾಡುವ ವ್ಯಾಪಾರ ಮಾಡುತ್ತಿರುತ್ತಾರೆ ಎಂದರೆ ಸರಿ. ನಾವು ಈರುಳ್ಳಿ ಅಲ್ಲದೇ ತರಕಾರಿಗಳನ್ನೂ ಸಹಾ ಹೆಚ್.ಕೆ.ಬಿ ಟ್ರೇಡರ್ ಗೆ ಕೊಡುತ್ತಿದ್ದೆವು ಎಂದರೆ ಸರಿ. ನಾವು ಈರುಳ್ಳಿ ಮತ್ತು ತರಕಾರಿಗಳನ್ನು ಆರೋಪಿಗೆ ಸಾಲದ ರೂಪದಲ್ಲಿ ಕೊಡುತ್ತಿದ್ದೆವು ಎಂದರೆ ಸಾಕ್ಷಿಯು ಕೊಡುತ್ತಿದ್ದೆವು ಮತ್ತು ಪಡೆದುಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ. ನಾನೂ ಕೂಡ ಆರೋಪಿಯಿಂದ ಬಿತ್ತನೆ ಬೀಜಗಳನ್ನು ಸಾಲದ ಮೂಲಕ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ಮತ್ತು ಆರೋಪಿಯ ನಡುವೆ 2018 ರಿಂದ ಹಣದ ವ್ಯವಹಾರ ಇತ್ತು ಎಂದರೆ ಸಾಕ್ಷಿಯು 8 - 10 ವರ್ಷಗಳಿಂದ ಇತ್ತು ಎಂದು ನುಡಿಯುತ್ತಾರೆ. ನಾನು ವಾರ್ಷಿಕವಾಗಿ ಒಂದುವರೆ ಲಕ್ಷ ಹಣದಷ್ಟು ಬಿತ್ತನೆ ಬೀಜಗಳನ್ನು ಸಾಲವಾಗಿ ಪಡೆಯುತ್ತಿದ್ದೆ ಎಂದರೆ ಸಾಕ್ಷಿಯು ಕೊಡುತ್ತಿದ್ದೆವು ಮತ್ತು ಪಡೆಯುತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ವ್ಯವಸಾಯ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ.

ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ. ಐದು ಲಕ್ಷಕ್ಕಿಂತ ಮೇಲ್ಪಟ್ಟ ಆದಾಯ ಇರುವ ವ್ಯಕ್ತಿ ತೆರಿಗೆ ಪಾವತಿ ಮಾಡಬೇಕು ಎಂಬ ವಿಚಾರ ನನಗೆ ಗೊತ್ತಿಲ್ಲ. ತೆರಿಗೆ ಪಾವತಿ ಮಾಡದಿದ್ದಲ್ಲಿ ಅದು ಕಾನೂನು ಬಾಹಿರ ಎಂದರೆ ವ್ಯವಸಾಯ ಮಾಡುವವರಿಗೆ ಅದು ಏಕೆ ಅಕ್ರಮವಾಗುತ್ತದೆ ಎಂದು ಸಾಕ್ಷಿ

ನುಡಿಯುತ್ತಾರೆ. ಕಾನೂನು ಪ್ರಕಾರ ಯಾವುದೇ ಸಾಲದ ವ್ಯವಹಾರ ಮಾಡಬೇಕಾದಲ್ಲಿ ಸರ್ಕಾರದಿಂದ ಪರವಾನಗಿ ಪಡೆಯಬೇಕು ಈ ಕಾರಣದಿಂದ ನಾನು ಹೇಳಿದ ವ್ಯವಹಾರ ಕಾನೂನು ಬಾಹಿರ ಎಂದರೆ ಸಾಕ್ಷಿಯು ನಾನು ವಿಶ್ವಾಸದ ಮೂಲಕ ಹಣ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ಹೆಚ್.ಕೆ.ಬಿ ಟ್ರೇಡರ್ ರವರು ನನ್ನಿಂದ 07.12.2018 ರಂದು 28 ಬ್ಯಾಗ್ ಈರುಳ್ಳಿಗಳನ್ನು ಕೊಂಡಿರುತ್ತಾರೆ, ಅದಕ್ಕೆ ಪ್ರತಿಫಲವಾಗಿ 50,350-00 ರೂ.ಗಳನ್ನು ನೆಫ್ಟ್ ಮೂಲಕ ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದೇ ಬೇರೆ ವ್ಯವಹಾರ, ಇದೇ ಬೇರೆ ವ್ಯವಹಾರ ಎಂದು ನುಡಿಯುತ್ತಾರೆ. ಅದೇ ರೀತಿ ದಿಃ 13.03.2019 ರಂದು 1,15,000-00 ರೂ.ಗಳು ನನ್ನ ಖಾತೆಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಅದೇ ರೀತಿ ದಿಃ 23.11.2018 ರಂದು 50,000-00 ರೂ.ಗಳು ನೆಫ್ಟ್ ಮೂಲಕ ನನ್ನ ಖಾತೆಗೆ ವರ್ಗಾವಣೆಯಾಗಿದೆ ಎಂದರೆ ಸರಿ.

ನನಗೆ ಸಿಂಡಿಕೇಟ್ ಬ್ಯಾಂಕ್ ನ ಚೆಕ್ಕನ್ನು ನೀಡಿರುತ್ತಾರೆ. ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ವಿಲೀನವಾಗಿರುವ ವಿಚಾರ ನನಗೆ ಗೊತ್ತು. ಅದು ಯಾವ ದಿನಾಂಕ ಆಗಿದೆ ಎಂದು ಗೊತ್ತಿಲ್ಲ. ದಿಃ 30.08.2019 ರಂದು ವಿಲೀನವಾಗಿದೆ ಎಂದರೆ ಗೊತ್ತಿಲ್ಲ. ವಿಲೀನವಾದ ನಂತರ ಆರೋಪಿ ಹೊಸ ಬ್ಯಾಂಕಿನ ಚೆಕ್ ಗಳನ್ನು ಪಡೆದಿರುತ್ತಾರೆ , ನನಗೆ ಯಾವಾಗಲೂ ನಿಪಿ 1 ರ ಚೆಕ್ಕನ್ನು ನೀಡಿಲ್ಲ, ನಿಪಿ 1(ಎ) ರ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ.

ನಿಪಿ 1 ರ ಮೇಲೆ ರಾಜಪ್ಪ ಕೆ.ಪಿ, ಆರು ಲಕ್ಷ ಎಂದು ಆರೋಪಿ ಬರೆದಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ, ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ